ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2220
ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್
ಉತ್ತರಿಸುವ ದಿನಾಂಕ : 18.03.2022.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಇಲಾಖೆಯಿಂದ ಜಾರಿಯಲ್ಲಿರುವ ಯೋಜನೆಗಳಾವುವು (ವಿವರ ನೀಡುವುದು)	ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅನುಷ್ಠಾನಗೊಳಸುತ್ತಿರುವ ಯೋಜನೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.
ಆ)	ಸದರಿ ಯೋಜನೆಗಳ ಮಾರ್ಗಸೂಚಿಗಳೇನು; (ವಿವರ ಒದಗಿಸುವುದು)	ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ.
ಇ)	ಕಳೆದ 5 ವರ್ಷಗಳಿಂದ ಜಾರಿಯಲ್ಲಿರುವ ಯೋಜನೆಗಳ ಪ್ರಗತಿಯು ಯಾವ ಹಂತದಲ್ಲಿದೆ; (ವಿವರ ಒದಗಿಸುವುದು)	ವಿವರಗಳನ್ನು **ಅನುಬಂಧ-3** ನೀಡಿದೆ.
ಈ)	ಯಾವುದಾದರೂ ಹೊಸ ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? (ಇದ್ದಲ್ಲಿ, ವಿವರಗಳನ್ನು ನೀಡುವುದು)	ಸಮಾಜ ಕಲ್ಯಾಣ ಇಲಾಖೆವತಿಯಿಂದ 2022-23ನೇ ಸಾಲಿಗೆ ಜಾರಿ ಮಾಡಲಿರುವ ಹೊಸ ಯೋಜನೆಗಳ ವಿವರಗಳನ್ನು **ಅನುಬಂಧ-4** ನೀಡಿದೆ.

ಸಂಖ್ಯೆ: ಸಕಇ 129 ಆರ್&ಐ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ-1

ಪ್ರಶ್ನೆ ಸಂಖ್ಯೆ -1856 (2220) ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು)

ಕ್ರ ಸಂ.	ಕಾರ್ಯಕ್ರಮಗಳು/ಯೋಜನೆಗಳು
I.	**ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು**
1	ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ
2	ವಸತಿ ಶಾಲೆಗಳ ನಿರ್ವಹಣೆ
3	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
4	ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಪ್ರೋತ್ಸಾಹಧನ
5	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ
6	ರಾಷ್ಟ್ರೀಯ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಧನಸಹಾಯ
7	ಬುಕ್‌ಬ್ಯಾಂಕ್ ಯೋಜನೆ
8	ಪ್ರತಿಭಾ ಪುರಸ್ಕಾರ
9	ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ
10	ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಧನಸಹಾಯ
II.	**ಮೂಲಭೂತ ಸೌಕರ್ಯಗಳು**
1	ಸಮುದಾಯ ಭವನಗಳ ನಿರ್ಮಾಣ
2	ಪರಿಶಿಷ್ಟ ಜಾತಿಯ ಕಾಲೋನಿಗಳಿಗೆ ಮೂಲಭೂತ ಸೌಕರ್ಯ
3	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಧನಸಹಾಯ
4	ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು ಧನಸಹಾಯ
5	ಸ್ಮಶಾನ ಭೂಮಿ ಅಭಿವೃದ್ಧಿ
6	ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ.
III.	**ತರಬೇತಿ ಕಾರ್ಯಕ್ರಮ**
1	ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ
2	ಜಿ.ಎನ್.ಎಂ. ಮತ್ತು ಬಿ.ಎಸ್.ಸಿ ನರ್ಸಿಂಗ್ ತರಬೇತಿ
3	ಕೌಶಲ್ಯಾಭಿವೃದ್ಧಿ ತರಬೇತಿ
4	ಕಾನೂನು ಪದವೀಧರರಿಗೆ ಶಿಷ್ಯವೇತನ
IV.	**ಸಾಮಾಜಿಕ ಸಬಲೀಕರಣ ಕಾರ್ಯಕ್ರಮಗಳು**
1	PCR Act 1955 (ನಾಗರಿಕ ಹಕ್ಕುಗಳ ಸಂರಕ್ಷಣೆ ಕಾಯ್ದೆ) ರ ಅನುಷ್ಠಾನ
ಅ)	ಅಂತರ್‌ಜಾತಿ ವಿವಾಹವಾಗುವ ದಂಪತಿಗಳಿಗೆ ಪ್ರೋತ್ಸಾಹ ಧನ
ಆ)	ಅಸ್ಪೃಶ್ಯತೆಯ ನಿವಾರಣೆಗಾಗಿ ಅರಿವು ಮೂಡಿಸುವ ಕಾರ್ಯಕ್ರಮ
2	POA Act 1989 (ದೌರ್ಜನ್ಯ ತಡೆ ಅಧಿನಿಯಮ)ರ ಅನುಷ್ಠಾನ
ಅ)	ದೌರ್ಜನ್ಯಕ್ಕೊಳಗಾದ ಸಂತ್ರಸ್ತರಿಗೆ ಪರಿಹಾರ
ಆ)	ದೌರ್ಜನ್ಯಕ್ಕೊಳಗಾದ ಸಂತ್ರಸ್ತರಿಗೆ ಪುನರ್ವಸತಿ

ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ

ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಡಿ ಕಾರ್ಯ ನಿರ್ವಹಿಸುತ್ತಿದೆ. ಯೋಜನೆಗಳ ವಿವರ ಈ ಕೆಳಕಂಡಂತಿದೆ.

I. ಅಭಿವೃದ್ಧಿ ಕಾರ್ಯಕ್ರಮಗಳು:

1. ತರಬೇತಿ ಕಾರ್ಯಕ್ರಮಗಳು
   a. ಕೌಶಲ್ಯ ಅಭಿವೃದ್ಧಿ ತರಬೇತಿ.
   b. ಉನ್ನತೀಕರಣ ಯೋಜನೆ
2. ಸ್ವಯಂ ಉದ್ಯೋಗ ಯೋಜನೆಗಳು
   a. ಸ್ವಾವಲಂಬಿ / ಸಂಚಾರಿ ಮಾರಾಟ ಮಳಿಗೆ ಯೋಜನೆ
   b. ದುಡಿಮೆ ಬಂಡವಾಳ ಸಹಾಯ ಯೋಜನೆ
   c. ಚರ್ಮಶಿಲ್ಪ" ಯಂತ್ರಾಧಾರಿತ ಉತ್ಪಾದನಾ ಘಟಕ ಸ್ಥಾಪಿಸುವ ಯೋಜನೆ
   d. ನೇರ ಸಾಲ ಯೋಜನೆ
   e. ಪಾದುಕೆ ಕುಟೀರ ಒದಗಿಸುವ ಯೋಜನೆ
   f. ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ ಒದಗಿಸುವ ಯೋಜನೆ
3. ಡಾ.ಬಾಬು ಜಗಜೀವನ ರಾಂ ಚರ್ಮಕಾರರ ವಸತಿ ಯೋಜನೆ.
4. ಪ್ರಗತಿ ಲಿಡಕರ್ ಕಾಲೋನಿಗಳ ಸಮಗ್ರ ಅಭಿವೃದ್ಧಿ.

II. ವಾಣಿಜ್ಯ ಉತ್ತೇಜನ ಕಾರ್ಯಕ್ರಮಗಳು:

1. ಲಿಡಕರ್ ಪುನಃಶ್ಚೇತನ ಕಾರ್ಯಕ್ರಮಗಳು

   ಚರ್ಮ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಲ್ಲಿ ಜಾರಿಗೊಳಸಲಾಗುತ್ತಿರುವ ಯೋಜನೆಗಳ ವಿವರ:-

1. ಸ್ವಯಂ ಉದ್ಯೋಗ - ನೇರಸಾಲ
2. ಸ್ವಯಂ ಉದ್ಯೋಗ - ಐಎಸ್‌ಬಿ
3. ಐರಾವತ
4. ಮೈಕ್ರೋ ಕ್ರೆಡಿಟ್ ಯೋಜನೆ
5. ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರ ಯೋಜನೆ
6. ಟ್ಯಾಬ್ ವಿತರಣಾ ಯೋಜನೆ
7. ದ್ವಿಚಕ್ರ ವಾಹನ ವಿತರಣಾ ಯೋಜನೆ

*****

ಅನುಬಂಧ-2

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವತಿಯಿಂದ:

- ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ವಿದ್ಯಾಭ್ಯಾಸ ನೀಡುವುದು/ ಶಿಕ್ಷಕರುಗಳಿಗೆ ಅಧ್ಯಯನ ಕೋರ್ಸುಗಳನ್ನು, ಸಮ್ಮೇಳನಗಳನ್ನು, ಉಪನ್ಯಾಸಗಳನ್ನು, ಕಾರ್ಯಾಗಾರಗಳನ್ನು ಮತ್ತು ಇತರೆ ಚಟುವಟಿಕೆಗಳನ್ನು ನಡೆಸುವುದು.
- ವಸತಿ ಶಾಲೆಗಳ ಉತ್ತಮ ಕಾರ್ಯನಿರ್ವಹಣೆಗೆ ಅಗತ್ಯವಿರುವ ಶೈಕ್ಷಣಿಕ ಮತ್ತು ಇತರೆ ಹುದ್ದೆಗಳನ್ನು ಸಂಬಂಧಪಟ್ಟ ಇಲಾಖೆಗಳ ಮೂಲಕ ಸೃಜಿಸುವುದು.
- ಸಂಘದ ಮತ್ತು ವಸತಿ ಶಾಲೆಗಳ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯವಿರುವ ಸಮಿತಿಗಳನ್ನು ರಚಿಸುವುದು.
- ಸಂಘದ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ ಅಗತ್ಯವಿರುವ ಅನುದಾನವನ್ನು ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಮತ್ತು ಇತರ ಮೂಲಗಳಿಂದ ಸ್ವೀಕರಿಸುವುದು.
- ವಸತಿ ಶಾಲೆಗಳಿಗೆ ಅಗತ್ಯವಿರುವ ಶಾಲಾ ಸಂಕೀರ್ಣಗಳನ್ನು ನಿರ್ಮಿಸುವುದು ಮತ್ತು ಅವುಗಳ ನಿರ್ವಹಣೆ.

ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿ ಎಲ್-1 ಗುತ್ತಿಗೆದಾರರ ಮೂಲಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

ಯೋಜನೆಗಳನ್ನು ಅನುಷ್ಠಾನಗೊಳಿಸಲು ಇರುವ ಮಾರ್ಗಸೂಚಿಗಳ ವಿವರ ಕೆಳಕಂಡಂತಿದೆ.

1. ಅರ್ಜಿದಾರರು ಪರಿಶಿಷ್ಟ ಜಾತಿಯ ಮಾದಿಗ ಮತ್ತು ಸಂಬಂಧಿತ ಜಾತಿಗೆ ಸೇರಿದವರಾಗಿರಬೇಕು.
2. ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಎಂಬ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಕಡ್ಡಾಯವಾಗಿ ಮೂಲ ಜಾತಿಯನ್ನು ನಮೂದಿಸಿ ಸ್ವಯಂ ಘೋಷಿತ ಪ್ರಮಾಣ ಪತ್ರವನ್ನು ಸಲ್ಲಿಸುವುದು.
3. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
4. ಅರ್ಜಿದಾರರು 21 ವರ್ಷ ಮೇಲ್ಪಟ್ಟ ವಯೋಮಾನದವರಾಗಿರಬೇಕು.
5. ಅರ್ಜಿದಾರ/ಕುಟುಂಬದ ಅವಲಂಭಿತ ಸದಸ್ಯರು ಸರ್ಕಾರಿ/ಅರೆ ಸರ್ಕಾರಿ ನೌಕರಿಯಲ್ಲಿರಬಾರದು.
6. ಅರ್ಜಿದಾರರು ಆಯ್ಕೆ ಸಮಿತಿಯಿಂದ ಆಯ್ಕೆ ಆಗಬೇಕು.
7. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ರೂ.1,50,000/- ಗ್ರಾಮೀಣ ಹಾಗೂ ರೂ.2,00,000/- ನಗರ ಪ್ರದೇಶದವರಿಗೆ ಮಿತಿಯೊಳಗಿರಬೇಕು.
8. ಮೈಕ್ರೋ ಕ್ರೆಡಿಟ್ ಯೋಜನೆಯಾದಲ್ಲಿ ಅರ್ಜಿದಾರರು ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಾಗಿರಬೇಕು ಅಥವಾ ಹೊಸದಾಗಿ ಸದಸ್ಯತ್ವವನ್ನು ಪಡೆಯಬೇಕು.

9. ಅರ್ಜಿದಾರರು ಸ್ವ-ಸಹಾಯ ಸಂಘದ ಭಾಗವಾಗಿ ಇರುವ ಬಗ್ಗೆ ಮತ್ತು ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸಿ ವ್ಯಾಪಾರ-ವಹಿವಾಟನ್ನು ನಿರ್ವಹಿಸಿ ಆದಾಯವನ್ನು ಮಾತ್ರ ಪಡೆಯವ ಬಗ್ಗೆ ಲಿಖಿತ ಒಪ್ಪಿಗೆ ನೀಡಬೇಕು. ನಿಗಮ ನೀಡುವ ಸಾಲ ಮತ್ತು ಸಹಾಯಧನವನ್ನು ಮೂಲ ಬಂಡವಾಳವನ್ನಾಗಿ ಬಳಸಬೇಕು.
10. ಭೂ ಒಡೆತನ ಯೋಜನೆಯಡಿ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಾಗಿರಬೇಕು.
11. ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆಯಲು 1-1/2 ರಿಂದ 5.00 ಎಕರೆವರೆಗೆ ಖುಷ್ಕಿ ಜಮೀನು ಹೊಂದಿರಬೇಕು. (ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಟ 1-00 ಎಕರೆ)
12. ಅರ್ಜಿದಾರ ಮತ್ತು ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸಾಲ ಸೌಲಭ್ಯ ಪಡೆದಿದ್ದಲ್ಲಿ ಅಂತಹವರನ್ನು ಅನರ್ಹರೆಂದು ಪರಿಗಣಿಸಲಾಗುವುದು

ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ:

ಯೋಜನೆಗಳಿಗೆ ಮಾರ್ಗಸೂಚಿಗಳು ಕೆಳಕಂಡಂತಿದೆ.

1. ಚರ್ಮ ಕುಶಲಕರ್ಮಿಗಳು ಪರಿಶಿಷ್ಟ ಜಾತಿಯಲ್ಲಿ ಬರುವ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಸಮುದಾಯಗಳಿಗೆ ಸೇರಿದ ಕುಟುಂಬದವರಾಗಿರಬೇಕು.
2. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
3. ಕನಿಷ್ಟ 18 ವರ್ಷ ವಯಸ್ಸು ಮೀರಿರಬೇಕು ಮತ್ತು 50 ವರ್ಷದ ಒಳಗಿರಬೇಕು.
4. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶದಲ್ಲಿ ರೂ. 1,50,000/- ಮತ್ತು ನಗರ ಪ್ರದೇಶದವರಿಗೆ ರೂ. 2,00,000/- ಗಳ ಮಿತಿ ಒಳಗಿರಬೇಕು
5. ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಅವಕಾಶ ನೀಡುವುದು.
6. ವಿಕಲಚೇತನರಿಗೆ/ಮಹಿಳೆಯರಿಗೆ/ವಿಧವೆಯರಿಗೆ ಆದ್ಯತೆ ನೀಡುವುದು. ವಿಕಲಚೇತನರಿಗೆ ಶೇಕಡ 3 ರಷ್ಟು ಆದ್ಯತೆ ನೀಡಬೇಕು.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಯೋಜನೆಗಳ ಮಾರ್ಗಸೂಚಿಗಳು ಈ ಕೆಳಕಂಡಂತಿದೆ;

1. ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಾಗಿರಬೇಕು.
2. ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಗುರುತಿನ ಚೀಟಿ ಹೊಂದಿರಬೇಕು.
3. ಆದಾಯ ಗರಿಷ್ಟ ರೂ. 2.00 ಲಕ್ಷಗಳಾಗಿರಬೇಕು.
4. 5 ವರ್ಷಗಳ ಅನುಭವ ಪ್ರಮಾಣ ಪತ್ರ ಹೊಂದಿರಬೇಕು.

****

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ

ಅನುಬಂಧ-2

2022-23 ನೇ ಸಾಲಿನ ನೂತನ ಯೋಜನೆಗಳ ವಿವರ

2022-23 ನೇ ಸಾಲಿಗೆ ಪ್ರಗತಿ ಯೋಜನೆಯಡಿ ಭೋವಿ ಜನಾಂಗದವರು ವಾಸಿಸುವ ಕಾಲೋನಿಗಳಗೆ ಮೂಲಭೂತ ಸೌಕರ್ಯ ಕಲ್ಪಿಸಲು ಮತ್ತು ಭೋವಿ ಕುಟುಂಬಗಳ ಸಮೀಕ್ಷೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಹೊಸ ಯೋಜನೆಗಳನ್ನು ಭೋವಿ ನಿಗಮದಿಂದ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.

1) ಪ್ರಗತಿ ಯೋಜನೆ:-

ಭೋವಿ ಜನಾಂಗದವರು ವಾಸಿಸುವ ಕಾಲೋನಿಗಳ ಸಮಗ್ರ ಅಭಿವೃದ್ಧಿ ಯೋಜನೆ ಹಾಗೂ ನವ ಮಾದರಿ ಕಾಲೋನಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶುದ್ಧ ಕುಡಿಯುವ ನೀರಿನ ಘಟಕ, ಸಾರ್ವಜನಿಕ ಸಮುದಾಯ ಶೌಚಾಲಯ, ಸರ್ವಋತು ಕಾಂಕ್ರೀಟ್ ರಸ್ತೆಗಳು, ಚರಂಡಿ ನಿರ್ಮಾಣ, ಸಮುದಾಯ ಭವನಗಳು, ಚಿತ್ರದುರ್ಗದಲ್ಲಿರುವ ಭೋವಿ ಸಮಾಜದ ಮಠಕ್ಕೆ ಮೂಲಭೂತ ಸೌಕರ್ಯ ಒದಗಿಸಲು ಸೇರಿದಂತೆ ನಿರ್ಮಿಸಬಹುದಾಗಿರುತ್ತದೆ.

2) ಸಮೀಕ್ಷಾ ಯೋಜನೆ :- ಕರ್ನಾಟಕ ರಾಜ್ಯದಲ್ಲಿರುವ ಭೋವಿ ಕುಟುಂಬಗಳನ್ನು ಸಮೀಕ್ಷೆ ಮಾಡಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಕೆಳವರ್ಗದ ಆರ್ಥಿಕವಾಗಿ ಹಿಂದುಳಿದ ಭೋವಿ ಜನಾಂಗದ ಜನಗಳನ್ನು ಆರ್ಥಿಕವಾಗಿ ಸಧೃಡಗೊಳಿಸಲು ಭೋವಿ ಜನಾಂಗದ ಸಮೀಕ್ಷೆ ಅವಶ್ಯಕವಾಗಿರುತ್ತದೆ. ದಿನಾಂಕ:14.01.2022 ರ ಅಂದಾಜು ಸಮಿತಿಯಲ್ಲಿ ಮಾನ್ಯ ಶಾಸಕರ ಸಭೆಯ ನಡವಳಿಯಲ್ಲಿ ಭೋವಿ ಜನಾಂಗದ ನಿರುದ್ಯೋಗಿ ಯುವಕ/ಯುವತಿಯರ ಸಂಖ್ಯೆ ಪದವೀಧರರು, ಸ್ನಾತಕೋತ್ತರ ಪಧವೀದರರು, ಅವಿದ್ಯಾವಂತರು, ಭೂ ರಹಿತ, ವಸತಿ ರಹಿತ ಹಾಗೂ ಇತರೆ ನಿರ್ಗತಿಕರ ಬಗ್ಗೆ ಸಮಗ್ರ ವರದಿ ಮಾಡಲು ಸಭೆಯ ನಡವಳಿಯಲ್ಲಿ ಸೂಚಿಸಲಾಗಿರುವುದನ್ನು ಪರಿಗಣಿಸಿ ಪ್ರಸ್ತುತ ವರದಿ ಸಲ್ಲಿಸುವ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

ಮೇಲ್ಕಂಡ ಯೋಜನೆಯ ಅನುಷ್ಠಾನಕ್ಕಾಗಿ ಬೇಕಾಗಿರುವ ಅನುದಾನದ ವಿವರಗಳು

ಕ್ರ.ಸಂ	ಯೋಜನೆಯ ಹೆಸರು	ಭೌತಿಕ ಗುರಿ	ಒಟ್ಟು ಬೇಕಾಗುವ ಅನುದಾನ (ರೂ.ಲಕ್ಷಗಳಲ್ಲಿ)
1	ಪ್ರಗತಿ ಯೋಜನೆ: ಕಾಲೋನಿಗಳ ಸಮಗ್ರ ಅಭಿವೃದ್ಧಿ ಯೋಜನೆ ಹಾಗೂ ನವ ಮಾದರಿ ಕಾಲೋನಿ ಇನ್ನಿತರೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಭೋವಿ ಕಾಲೋನಿ ಸಮಗ್ರ ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳು.	75	1125.00
2	ಕರ್ನಾಟಕ ರಾಜ್ಯದಲ್ಲಿರುವ ಭೋವಿ ಕುಟುಂಬಗಳ ಸಮೀಕ್ಷೆ ಹಾಗೂ ಯೋಜನಾವಾರು ಅರ್ಹ ಫಲಾನುಭವಿಗಳ ಪಟ್ಟಿ ತಯಾರಿಸಲು ಸಮೀಕ್ಷಾ ಯೋಜನೆ	60	60.00
		ಒಟ್ಟು	**1185.00**

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವು ನೂತನವಾಗಿ ಪ್ರಾರಂಭವಾಗಿದ್ದು, ಭೋವಿ ಜನಾಂಗದವರಿಗೆ ಹೆಚ್ಚು ಆರ್ಥಿಕ ಸೌಲಭ್ಯವನ್ನು ಕಲ್ಪಿಸಿ ಆರ್ಥಿಕವಾಗಿ ಸದೃಢಗೊಳಿಸಿ ಸಮಾಜದ ಮುಖ್ಯವಾಹಿನಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ

ಅನುಬಂಧ - 2

ವೈಯಕ್ತಿಕ ಫಲಾನುಭವಿ ಆಧಾರಿತ ಯೋಜನೆಗಳಿಗೆ ಅನುಸರಿಸುವ ಮಾನದಂಡಗಳ ವಿವರ

ನೇರಸಾಲ ಯೋಜನೆ

ನೇರಸಾಲ ಯೋಜನೆ ಚಟುವಟಿಕೆಗಳು :- ಘಟಕ ವೆಚ್ಚ ರೂ. 50,000/-ಗಳ (ಗರಿಷ್ಟ ಸಹಾಯಧನ ರೂ.25,000/- ಸಾಲ ರೂ.25,000/-) ಸೌಲಭ್ಯವನ್ನು ನಿಗಮದಿಂದ ನೇರವಾಗಿ ಮಂಜೂರಾತಿ ಮಾಡಲಾಗುವುದು.

ಕೈಗೊಳ್ಳಬಹುದಾದ ಚಟುವಟಿಕೆಗಳು

ಹಣ್ಣು ಹಂಪಲು, ಮೀನು ಮಾಂಸ, ಕುರಿ, ಹಂದಿ, ಮೊಲ, ಹಸು, ಸಾಕಾಣಿಕೆ, ಮಳಿಗೆ/ತಳ್ಳುಗಾಡಿ ದುಡಿಮೆ/ ಇತ್ಯಾದಿ ಕಿರು ಆರ್ಥಿಕ ಚಟುವಟಿಕೆಗಳಿಗೆ

ಮಾನದಂಡಗಳು

1. ಫಲಾನುಭವಿಗಳು ಕಡ್ಡಾಯವಾಗಿ ಪರಿಶಿಷ್ಟ ಜಾತಿ ಲಂಬಾಣಿ ಜನಾಂಗದವರಾಗಿರತಕ್ಕದ್ದು.
2. ಲಂಬಾಣಿ/ಬಂಜಾರ ಜನಾಂಗದ 21 ವರ್ಷದಿಂದ 50 ವರ್ಷದವರೆಗಿನ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡಿತರ ಚೀಟಿ, ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.

ಮರುಪಾವತಿ ವಿವರ

ಸದರಿ ಯೋಜನೆಯಲ್ಲಿ ಪಡೆದ ಸಾಲವನ್ನು ಫಲಾನುಭವಿ ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ 18 ತಿಂಗಳುಗಳ ಒಳಗೆ ಮರುಪಾವತಿಸಬೇಕು. ಮಂಜೂರಾಗಿ 3 ತಿಂಗಳ ನಂತರ ಮರು ಪಾವತಿ ಪ್ರಾರಂಭಿಸತಕ್ಕದ್ದು.

ಉದ್ಯಮಶೀಲತಾ ಯೋಜನೆ :

ಪರಿಶಿಷ್ಟ ಜಾತ್ತಿಯ ಲಂಬಾಣಿ/ಬAಜಾರ/ಲಮಾಣಿ ಜನಾಂಗದ ಅರ್ಹ ನಿರುದ್ಯೋಗಿಗಳು ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡು, ಆದಾಯ ಗಳಿಸಲು ಘಟಕ ವೆಚ್ಚಕ್ಕೆ ಬ್ಯಾಂಕಿನಿAದ ಮಂಜೂರಾದ ಸಾಲದ ಶೇ. 70 ರಷ್ಟು ಅಥವಾ ಗರಿಷ್ಠ ರೂ. 2.00 ಲಕ್ಷದವರೆಗೆ ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡಲಾಗುವುದು. ಹಾಗೂ ಸರಕು ವಾಹನಗಳಿಗೆ ಗರಿಷ್ಟ ರೂ.3.50 ಲಕ್ಷ ಸಹಾಯಧನ ನಿಗಮದಿಂದ ಮಂಜೂರು ಮಾಡಿ ಬ್ಯಾಂಕ್ ಸಹಯೋಗದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಕೈಗೊಳ್ಳಬಹುದಾದ ಚಟುವಟಿಕೆಗಳು

ಬ್ಯೂಟಿ ಪಾರ್ಲರ್, ಸಾಫ್ಟ್ ಡ್ರಿಂಕ್ಸ್ ಘಟಕ, ದಿನಸಿ/ಸ್ಟೇಷನರಿ ಅಂಗಡಿ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ವಕೀಲರ ಕಛೇರಿ, ಎಲೆಕ್ಟ್ರಿಕಲ್ ಶಾಪ್, ರೆಡಿಮೆಡ್ ಗಾರ್ಮೆಂಟ್ಸ್, ಆಟೋರಿಕ್ಷಾ, ಗೂಡ್ಸ್ ಕ್ಯಾರಿಯರ್, ಪ್ಯಾಸೆಂಜರ್ ಕಾರ್, ಚಪ್ಪಲಿ ಅಂಗಡಿ, ಸಿಮೆಂಟ್ ಬ್ರಿಕ್/ ಇಟ್ಟಿಗೆ ತಯಾರಿಕೆ ಹಾಗೂ ಇತರೆ ಯಾವುದೇ ಲಾಭದಾಯಕ ಸಣ್ಣ ಕೈಗಾರಿಕೆ /ಸೇವಾ ಘಟಕ / ವ್ಯಾಪಾರ ಉದ್ದಿಮೆ.

ಮಾನದಂಡಗಳು

1. ಫಲಾನುಭವಿಗಳು ಕಡ್ಡಾಯವಾಗಿ ಪರಿಶಿಷ್ಟ ಜಾತಿ ಲಂಬಾಣಿ ಜನಾಂಗದವರಾಗಿರತಕ್ಕದ್ದು.
2. ಲಂಬಾಣಿ/ಬಂಜಾರ ಜನಾಂಗದ 21 ವರ್ಷದಿಂದ 50 ವರ್ಷದವರೆಗಿನ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡಿತರ ಚೀಟಿ, ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.
3. ಮಂಜೂರಾತಿ ಮಾಡಿರುವ ಸಾಲವನ್ನು ಉದ್ದೇಶಿಸಿರುವ ಯೋಜನೆಗೆ ಮಾತ್ರ ಹಣ ಬಿಡುಗಡೆ ಮಾಡುವುದು.
4. ಬ್ಯಾಂಕ್ ಕ್ಲೇಮ್‌ನೊಂದಿಗೆ ಹಣ ಬಿಡುಗಡೆಗೆ ಸಲ್ಲಿಸುವುದು.

ಮರುಪಾವತಿ ವಿವರ

ಬ್ಯಾಂಕ್ ನಿಯಮದಂತೆ ಮರುಪಾವತಿ ಮಾಡುವುದು

ಮೈಕ್ರೋಕ್ರೆಡಿಟ್ ಯೋಜನೆ

ಮಹಿಳೆಯರಲ್ಲಿ ಗುಂಪು ಚಟುವಟಿಕೆಗಳಿಗೆ ಉತ್ತೇಜನ ನೀಡಲು ಮಹಿಳಾ ಗುಂಪುಗಳು ಸ್ವಯಂ ಉದ್ಯೋಗ ಕೈಗೊಂಡು ಆದಾಯ ಗಳಿಸಲು ಕನಿಷ್ಠ 10 ಸಂಖ್ಯೆಯ ಸದಸ್ಯರಿರುವ ನೋಂದಾಯಿತ ಮಹಿಳಾ ಸ್ವಸಹಾಯ ಸಂಘಗಳಿಗೆ ರೂ. 2.50 ಲಕ್ಷಗಳ (ಪ್ರತಿ ಸದಸ್ಯರಿಗೆ ರೂ.15,000/-ಗಳ ಸಹಾಯಧನ ಮತ್ತು ರೂ.10,000/-ಗಳ ಬೀಜಧನ) ಸೌಲಭ್ಯವನ್ನು ನಿಗಮದಿಂದ ಮಂಜೂರು ಮಾಡಲಾಗುವುದು

ಕೈಗೊಳ್ಳಬಹುದಾದ ಚಟುವಟಿಕೆಗಳು

ಫಿನೈಲ್ ತಯಾರಿಕೆ, ಸಾಬೂನ್ ತಯಾರಿಕೆ, ಅಗರಬತ್ತಿ ತಯಾರಿಕೆ, ಕೃಷಿಯಾಧರಿತ ಚಟುವಟಿಕೆ, ಸಣ್ಣ ಪ್ರಮಾಣದ ವ್ಯಾಪಾರ ಇತ್ಯಾದಿ ಲಾಭದಾಯಕ ಚಟುವಟಿಕೆಗಳು

ಮಾನದಂಡಗಳು

1. ಸಂಘದ ನೊಂದಣಿ, ನವೀಕರಣ ಪಡೆಯುವುದು.
2. ಲಂಬಾಣಿ/ಬಂಜಾರ ಜನಾಂಗದ 18 ವರ್ಷ ಮೇಲ್ಪಟ್ಟ ಮಹಿಳಾ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡಿತರ ಚೀಟಿ, ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.
3. ಮಂಜೂರಾತಿ ಮಾಡಿರುವ ಸಾಲವನ್ನು ಉದ್ದೇಶಿಸಿರುವ ಯೋಜನೆಗೆ ಮಾತ್ರ ಹಣ ಬಿಡುಗಡೆ ಮಾಡುವುದು.

4. ಸಾಲ ಮಂಜೂರಾದ 30 ದಿನದೊಳಗಾಗಿ ಸಂಘಗಳಿಗೆ ಸಾಲ ಬಿಡುಗಡೆ ಮಾಡಿ ನಿಗದಿತ ನಮೂನೆಯಲ್ಲಿ ಹಣ ವಿನಿಯೋಗ ಪ್ರಮಾಣ ಪತ್ರವನ್ನು ಸಲ್ಲಿಸುವುದು.
5. ಸಾಲ ಮರುಪಾವತಿ ಜವಾಬ್ದಾರಿ ವಹಿಸಿಕೊಳ್ಳುವ ಬಗ್ಗೆ ಸ್ವ ಸಹಾಯ ಸಂಘಗಳ ಕಾರ್ಯದರ್ಶಿಗಳಿಗೆ ಜವಾಬ್ದಾರಿ ವಹಿಸಿ ಛಾಪಾ ಕಾಗದದಲ್ಲಿ ಒಪ್ಪಂದ ಕರಾರು ಮಾಡಿಕೊಳ್ಳತಕ್ಕದ್ದು, ಪ್ರಾಮಿಸರಿ ನೋಟ್, ಕನ್ಸಿಡರೇಷನ್ ರಸೀದಿ, ವಾರಸುದಾರರನ್ನು ನೇಮಕ ಮಾಡುವ ಪತ್ರ ಹಾಗೂ ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್‌ನ್ನು ಸ್ವಸಹಾಯ ಸಂಘದ ಸದಸ್ಯರಿಂದ ಪಡೆಯುವುದು.
6. ಉಲ್ಲೇಖ(1)ರ ಸರ್ಕಾರ ಸುತ್ತೋಲೆಯಂತೆ ಕನಿಷ್ಠ 10 ಮಹಿಳೆಯರು ಸ್ವ ಸಹಾಯ ಗುಂಪಿಗೆ ಮಾತ್ರ ಹಣ ಬಿಡುಗಡೆ ಮಾಡತಕ್ಕದ್ದು, ಸದರಿ ಸ್ವಸಹಾಯ ಸಂಘವು ನೊಂದಣಿಯಾದ ಸಂಘ ಆಗಿರಬೇಕು.
7. ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು.
8. ಒಬ್ಬ ಸದಸ್ಯರಿಗೆ ಒಟ್ಟು ರೂ. 25,000/- ರಂತೆ (ರೂ.15,000/- ಸಹಾಯಧನ ಮತ್ತು ರೂ. 10,000/- ಸಾಲ) ಒಟ್ಟು 10 ಸದಸ್ಯರಿಗೆ ಒಟ್ಟು ರೂ. 2.50 ಲಕ್ಷ ನೀಡುವುದು. ಒಂದು ವೇಳೆ
9. ಸಂಘದಲ್ಲಿ 10 ಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ ಸದರಿ ಸಂಖ್ಯೆಗನುಗುಣವಾಗಿ ಸಾಲ ಸಹಾಯಧನ ನೀಡುವುದು.
10. ಸದರಿ ಸ್ವ ಸಹಾಯ ಸಂಘ ಆದಾಯ ಬರುವ ಆರ್ಥಿಕ ಚಟುವಟಿಕೆಗಳಾದ ಉತ್ಪಾದನಾ/ಸೇವಾ ಘಟಕಗಳನ್ನು ಕೈಗೊಳ್ಳತಕ್ಕದ್ದು.

ಮರುಪಾವತಿ

ಸದರಿ ಯೋಜನೆಯಡಿ ಪಡೆದ ಸಾಲವನ್ನು ಫಲಾನುಭವಿ ವಾರ್ಷಿಕ 4ರ ಬಡ್ಡಿ ದರದಲ್ಲಿ 3 ವರ್ಷಗಳಲ್ಲಿ ತ್ರೈಮಾಸಿಕ ಕಂತುಗಳಲ್ಲಿ ಮರು ಪಾವತಿಸಬೇಕು

ಗಂಗಾ ಕಲ್ಯಾಣ ಯೋಜನೆ

ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿರುವ ಖುಷ್ಕಿ ಜಮೀನಿಗೆ ರೂ 3.50/4.50 ಲಕ್ಷಗಳ ಘಟಕ ವೆಚ್ಚದಲ್ಲಿ ಕೊಳವೆಬಾವಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು

ಮಾನದಂಡಗಳು

1. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ಅರ್ಜಿದಾರರು ಪರಿಶಿಷ್ಟ ಲಂಬಾಣಿ ಜಾತಿಗೆ ಸೇರಿದವರಾಗಿರಬೇಕು.
3. ಸಣ್ಣ ಮತ್ತು ಅತೀ ಸಣ್ಣ ರೈತರ ಪ್ರಮಾಣ ಪತ್ರ ಇರಬೇಕು.

4. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಉತ್ತರ ಕನ್ನಡ ಕನಿಷ್ಠ 1 ಎಕರೆ ಹೊಂದಿರಬೇಕು. ಹಾಗೂ ಇತರೆ ಜಿಲ್ಲೆಗಳಲ್ಲಿ 1.50 ಎಕರೆಯಿಂದ 5.00 ಎಕರೆ ವರೆಗೆ ಖುಷ್ಕಿ ಜಮೀನು ಹೊಂದಿರಬೇಕು.

5. ಅರ್ಜಿದಾರರು/ಕುಟುಂಬದ ಅವಲಂಬಿತ ಯಾವುದೇ ಸದಸ್ಯರು ಈ ಹಿಂದೆ ನಿಗಮ/ಸರ್ಕಾರದಿಂದ ರೂ.1,00,000/ ಮೇಲ್ಪಟ್ಟು ಸೌಲಭ್ಯ ಪಡೆದಿದ್ದಲ್ಲಿ ಅಂತಹ ಫಲಾನುಭವಿಗಳು ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.

ಮರು ಪಾವತಿ

ರೂ.50,000/- ಗಳ ಸಾಲದ ಮೊತ್ತವನ್ನು ಶೇ.6 ರ ಬಡ್ಡಿ ದರದಲ್ಲಿ 10 ಅರ್ಧವಾರ್ಷಿಕ ಕಂತುಗಳಲ್ಲಿ ಸಾಲ ಮರುಪಾವತಿಸಬೇಕು.

ಭೂ – ಒಡೆತನ ಯೋಜನೆ:

ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ರೂ. 15.00/20.00 ಲಕ್ಷಗಳ ಘಟಕ ವೆಚ್ಚದಲ್ಲಿ, ಕೃಷಿಗೆ ಯೋಗ್ಯವಾದ ಜಮೀನನ್ನು ಪ್ರತಿ ಘಟಕದಲ್ಲಿ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಅಥವಾ ಕನಿಷ್ಠ 0.5 ಎಕರೆ (20 ಗುಂಟೆ) ಭಾಗಾಯ್ತು ಅಥವಾ ಘಟಕ ವೆಚ್ಚಕ್ಕೆ ಲಭ್ಯವಾಗುವಷ್ಟು ಜಮೀನನ್ನು ನಿಗಮದಿಂದ ಖರೀದಿಸಿ ನೋಂದಣಿ ಮಾಡಿಸಿಕೊಡಲಾಗುವುದು.

ಮರು ಪಾವತಿ

ಶೇ.50 ರಷ್ಟು ಸಹಾಯ ಧನ ಹಾಗೂ ಅವಧಿ ಸಾಲವಾಗಿರುತ್ತದೆ. ಅವಧಿ ಸಾಲವನ್ನು ವಾರ್ಷಿಕ 6ರ ಬಡ್ಡಿ ದರದಲ್ಲಿ 20 ಅರ್ಧ ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕಾಗಿರುತ್ತದೆ.

ಅನುಬಂಧ-2

ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅನುಸರಿಸಬೇಕಾದ ಮಾನದಂಡಗಳು

1. ಅರ್ಜಿಗಳನ್ನು ಆಹ್ವಾನಿಸುವಾಗ ದಿನಾಂಕ ನಿಗದಿಪಡಿಸಿ ಸದರಿ ದಿನಾಂಕದ ಒಳಗೆ ಬಂದ ಅರ್ಜಿಗಳನ್ನು ಮಾತ್ರ ಪರಿಗಣಿಸತಕ್ಕದ್ದು. ನಿಗದಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಬಾರದು ಮತ್ತು ಅವುಗಳನ್ನು ತಿರಸ್ಕರಿಸುವುದು.
2. ಬಂದಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ ಮುಂದೆ ಸಲ್ಲಿಸುವುದು ಮತ್ತು ಅರ್ಹರಾಗಿದ್ದಲ್ಲಿ ಮಾತ್ರ ಆಯ್ಕೆ ಮಾಡುವುದು.
3. ಅರ್ಜಿದಾರರು ಒಂದು ಬಾರಿಗಿಂತ ಹೆಚ್ಚಾಗಿ ಎರಡು ಮೂರು ಬಾರಿ ಅರ್ಜಿ ಸಲ್ಲಿಸಿದವರಿಗೆ ಮೊದಲನೇ ಆದ್ಯತೆ ನೀಡಿ ಆಯ್ಕೆ ಮಾಡುವುದು.
4. ಅರ್ಹ ಅಭ್ಯರ್ಥಿಗಳು ಹೆಚ್ಚಿಗೆ ಇದ್ದಲ್ಲಿ ಕಾಯ್ದಿರಿಸಿದ ಪಟ್ಟಿಯಲ್ಲಿ ಸೇರಿಸಿ ಮುಂದಿನ ಆಯ್ಕೆಯಲ್ಲಿ ಆದ್ಯತೆ ನೀಡುವುದು.
5. ವಿಧಾನಸಭಾ ಕ್ಷೇತ್ರಕ್ಕೆ ನೀಡಿದ ಗುರಿಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿವಿಧ ಜಾತಿಗಳ ಜನಸಂಖ್ಯೆಯ ಆಧಾರದ ಮೇಲೆ ಆಯ್ಕೆ ಮಾಡುವುದು ಅಂದರೆ ಬಡವರಲ್ಲಿ ಅತಿ ಬಡವರನ್ನು ಆಯ್ಕೆ ಮಾಡುವುದು.
6. ಆಯ್ಕೆ ಸಮಿತಿಯ ಆಯ್ಕೆ ಸಮಿತಿ ಸಭೆಯ ನಡವಳಿಗಳನ್ನು ವಿಡಿಯೋಗ್ರಾಫ್ ಮಾಡುವುದು.
7. ತಾಲ್ಲೂಕು ಮಟ್ಟದ ಸಮಿತಿ ಆಯ್ಕೆ ಪ್ರಕ್ರಿಯೆಯನ್ನು ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಒಳಗೆ ಪೂರ್ಣಗೊಳಿಸುವುದು. ಒಂದು ವೇಳೆ ಪೂರ್ಣಗೊಳಿಸದೇ ಇದ್ದಲ್ಲಿ ಅವುಗಳನ್ನು ಜಿಲ್ಲಾಧಿಕಾರಿಗಳು ಅಕ್ಟೋಬರ್ ತಿಂಗಳೊಳಗೆ ಆಯ್ಕೆ ಮಾಡುವುದು.
8. ಸದರಿ ಸಮಿತಿಯ ನಡವಳಿಯನ್ನು ಪಾರದರ್ಶಕವಾಗಿ ಯಾವುದೇ ಲೋಪ-ದೋಷಗಳು ಇಲ್ಲದೆ ಹೊರಡಿಸಬೇಕು. ಅದರಲ್ಲಿ ಲೋಪ-ದೋಷಗಳು ಇದ್ದಲ್ಲಿ ಸದರಿ ಸಮಿತಿಯ ಕಾರ್ಯದರ್ಶಿಗಳು ಹೊಣೆಗಾರರಾಗಿರುತ್ತಾರೆ.
9. ಆಯ್ಕೆಯಾದ ಪಟ್ಟಿಯನ್ನು ತಕ್ಷಣವೇ ಕೇಂದ್ರ ಕಛೇರಿಗಳಿಗೆ ಕಳುಹಿಸತಕ್ಕದ್ದು, ಮತ್ತು ಆಯ್ಕೆಯಲ್ಲಿ ಬದಲಾವಣೆ ಇದ್ದಲ್ಲಿ ಸದರಿ ಸಮಿತಿ ಸೂಕ್ತ ಕಾರಣಗಳನ್ನು ನೀಡಿ ಬದಲಿಸಬಹುದು.
10. ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಗ್ರಾಮವಾರು ಕಛೇರಿಯ ನೋಟಿಸ್ ಬೋರ್ಡಿನಲ್ಲಿ ಮರುದಿನ ಪ್ರದರ್ಶಿಸುವುದು.
11. ವಿವೇಚನಾ ಕೋಟಾದಲ್ಲಿ ಸಹ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಮತ್ತು ಇತರ ಅಧಿಕಾರಿಗಳನ್ನು ಸೇರಿಸಿಕೊಂಡು ಫಲಾನುಭವಿಗಳನ್ನು ಆಯ್ಕೆ ಮಾಡುವುದು.
12. ಸದರಿ ಸಮಿತಿ ಅರ್ಜಿದಾರರ ದೂರುಗಳನ್ನು ಸಹ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು. ಸದರಿ ಸಮಿತಿ ಸಹ ಕೊನೆ ದಿನಾಂಕವನ್ನು ನಿಗದಿಪಡಿಸಿ ಅರ್ಜಿಗಳನ್ನು ಆಹ್ವಾನಿಸಿ ಆಯ್ಕೆ ಮಾಡುವುದು.

ವ್ಯವಸ್ಥಾಪಕ ನಿರ್ದೇಶಕರು

ಅನುಬಂಧ-2

ಸಮಾಜ ಕಲ್ಯಾಣ ಇಲಾಖೆಯಡಿ ಅನುಷ್ಠಾನ ಮಾಡುತ್ತಿರುವ ಕಾರ್ಯಕ್ರಮಗಳಿಗೆ ನಿಗದಿಪಡಿಸಿರುವ ಮಾರ್ಗಸೂಚಿಗಳು

I. ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು :

➢ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ

ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ 5 ರಿಂದ 10ನೇ ತರಗತಿಯವರೆಗೆ ಓದುತ್ತಿರುವ ಪರಿಶಿಷ್ಟ ಜಾತಿ/ ಪ.ವರ್ಗದ ಬಾಲಕ, ಬಾಲಕೀಯರು ತಮ್ಮ ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗಲು 5 ಕಿ.ಮೀ. ದೂರದಿಂದ ಬರುವ ಹಾಗೂ ಸ್ಥಳೀಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಕಲ್ಪಿಸಲಾಗುತ್ತದೆ.

➢ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ

ಗ್ರಾಮೀಣ ಪ್ರದೇಶಗಳಿಂದ ಕಾಲೇಜು ಶಿಕ್ಷಣ ಪಡೆಯಲು ಬರುವ ಪ.ಜಾತಿ/ಪ.ವರ್ಗದ ವಿದ್ಯಾರ್ಥಿಗಳಿಗೆ ತಮ್ಮ ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗಲು ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.2.50 ಲಕ್ಷದ ಒಳಗಿನ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಕಲ್ಪಿಸಲಾಗುತ್ತದೆ.

➢ ಕ್ರೈಸ್ ವಸತಿ ಶಾಲೆಗಳಲ್ಲಿ ಪ್ರವೇಶ.

ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ದೃಷ್ಟಿಯಿಂದ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರವು ವಸತಿ ಶಾಲೆಗಳನ್ನು ಪ್ರಾರಂಭಿಸಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ನಿರ್ವಹಿಸಲಾಗುತ್ತದೆ.

- ಕುಟುಂಬದ ವಾರ್ಷಿಕ ಆದಾಯದ ಮಿತಿ ರೂ.2.50 ಲಕ್ಷದೊಳಗೆ ಇರುವ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರು.
- 5ನೇ ತರಗತಿಗೆ ವಿದ್ಯಾರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ, ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಮೀಸಲಾತಿ ಅನುಸರಿಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- ಕ್ರೈಸ್ ವಸತಿ ಶಾಲೆಗಳಲ್ಲಿ 25% ಸೀಟ್‌ಗಳನ್ನು ಆಯಾ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಮೀಸಲಿಡಲಾಗುವುದು.

➢ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರವೇಶ

ಕುಟುಂಬ ವಾರ್ಷಿಕ ಆದಾಯ ಮಿತಿ ರೂ.2.00 ಲಕ್ಷ ಒಳಗಿರುವ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಸಮಿತಿಯಿಂದ ಆಯ್ಕೆ ಮಾಡಲಾದ ಖಾಸಗಿ ಪ್ರತಿಷ್ಠಿತ ಶಾಲೆಗಳಿಗೆ ಪ್ರತಿಭಾವಂತ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳನ್ನು ದಾಖಲಿಸಿ ಬೋಧನಾ ಶುಲ್ಕ ಮತ್ತು ವಸತಿ ಸೌಕರ್ಯ ವೆಚ್ಚವನ್ನು ಸರ್ಕಾರದಿಂದ ಭರಿಸಲಾಗುತ್ತಿದೆ.

➢ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ (ಡೇ ಸ್ಕಾಲರ್‌ಶಿಪ್)

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ಮುಂದುವರೆಸುವಂತೆ ಪ್ರೋತ್ಸಾಹಿಸಲು ಹಾಗೂ ವಿದ್ಯಾಭ್ಯಾಸದ ನಡುವೆ ಶಾಲೆ ಬಿಡುವುದನ್ನು ತಪ್ಪಿಸಲು ಮತ್ತು ಪಾಲಕರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಉತ್ತೇಜಿಸಲು ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ.

ಕ್ರ.ಸಂ	ತರಗತಿ	ಅರ್ಹತೆ
1.	1 ರಿಂದ 8	ರೂ. 6.00 ಲಕ್ಷ ಕುಟುಂಬದ ಆದಾಯ ಮಿತಿ
2.	9 ರಿಂದ 10 (ಕೇಂದ್ರ ಪುರಸ್ಕೃತ)	ರೂ. 2.50 ಲಕ್ಷ ಕುಟುಂಬದ ಆದಾಯ ಮಿತಿ

ಅನೈರ್ಮಲ್ಯ ವೃತ್ತಿಗಳಲ್ಲಿ ತೊಡಗಿರುವವರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ

ತರಗತಿ	ಡೇ ಸ್ಕಾಲರ್	ಹಾಸ್ಟೆಲರ್
1 – 10	ರೂ. 3000/– ವಾರ್ಷಿಕ	ರೂ.8000/– ವಾರ್ಷಿಕ

➢ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಕುಟುಂಬದ ವಾರ್ಷಿಕ ಆದಾಯ ರೂ 2.50 ಲಕ್ಷ ಮಿತಿಯೊಳಗಿನ ಕಾಲೇಜು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಈ ವಿದ್ಯಾರ್ಥಿ ವೇತನದಲ್ಲಿ ಬೋಧನಾ ಶುಲ್ಕ ಮತ್ತು ಇತರೆ ಕಡ್ಡಾಯ ಶುಲ್ಕಗಳ ಪಾವತಿ, ಡೇ ಸ್ಕಾಲರ್ ವಿದ್ಯಾರ್ಥಿಗಳ ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳ ಭೋಜನಾ ವೆಚ್ಚವು ಸೇರಿರುತ್ತದೆ. ವಿದ್ಯಾರ್ಥಿ ವೇತನ ಪಡೆಯಲು State Scholarship Portal (SSP) ನಲ್ಲಿ ವಿದ್ಯಾರ್ಥಿಗಳು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವುದು. NRI, Management Quota ದಲ್ಲಿ On the spot ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಅರ್ಹರಲ್ಲ.

➢ ರಾಷ್ಟ್ರ ಮಟ್ಟದ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಧನಸಹಾಯ:

ಐ.ಐ.ಟಿ / ಐ.ಐ.ಎಂ / ಐ.ಐ.ಎಸ್.ಸಿ ಮತ್ತು ಎನ್.ಐ.ಟಿ ಅಂತಹ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ, ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಒಂದು ಅವಧಿಯ ಧನ ಸಹಾಯ-ಶುಲ್ಕ ರೂ.1.00 ಲಕ್ಷ ಮಂಜೂರು ಮಾಡಲಾಗುವುದು. ಆದಾಯ ಮಿತಿ ಇರುವುದಿಲ್ಲ.

➢ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ

ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಪ್ರೋತ್ಸಾಹಧನ ನೀಡಲಾಗುತ್ತದೆ.

ಕೋರ್ಸ್		ಪ್ರೋತ್ಸಾಹಧನ (ರೂ.ಗಳಲ್ಲಿ)
ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ	60–74.99% ಅಂಕ ಪಡೆದವರಿಗೆ	7000/-
	75%ಕ್ಕಿಂತ ಮೇಲ್ಪಟ್ಟು ಅಂಕ ಪಡೆದವರಿಗೆ	15000/-
ದ್ವಿತೀಯ ಪಿ.ಯು.ಸಿ ಅಂತಿಮ ಪರೀಕ್ಷೆ		20,000/-
ಪದವಿ. ಅಂತಿಮ ಪರೀಕ್ಷೆ		25,000/-
ಸ್ನಾತಕೋತ್ತರ ಪದವಿ ಅಂತಿಮ ಪರೀಕ್ಷೆ		30,000/-
ವೃತ್ತಿಪರ ಕೋರ್ಸ್ ಅಂತಿಮ ಪರೀಕ್ಷೆ – ವೈದ್ಯಕೀಯ, ಇಂಜಿನಿಯರಿಂಗ್ ಇತ್ಯಾದಿ		35,000/-
ಸ್ನಾತಕೋತ್ತರ ಪದವಿಯಲ್ಲಿ ವಿಶ್ವವಿದ್ಯಾಲಯದಲ್ಲಿ 1 ರಿಂದ 5 ರ್‍ಯಾಂಕ್ ವಿಜೇತರಿಗೆ		50,000/-

- ಆದಾಯಮಿತಿ ಇರುವುದಿಲ್ಲ.
- ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.

➢ ಕಾನೂನು ಪದವೀಧರರಿಗೆ ಪ್ರಾಯೋಗಿಕ ತರಬೇತಿ ಅವಧಿಯಲ್ಲಿ ಶಿಷ್ಯವೇತನ

ಪರಿಶಿಷ್ಟ ಜಾತಿ ಕಾನೂನು ಪದವೀಧರರು ಹಿರಿಯ ವಕೀಲರಿಂದ ಪ್ರಾಯೋಗಿಕ ತರಬೇತಿ ಪಡೆದು ಸ್ವತಂತ್ರವಾಗಿ ವಕೀಲ ವೃತ್ತಿ ನಡೆಸಲು ಅನುಕೂಲವಾಗುವಂತೆ ಶಿಷ್ಯ ವೇತನವನ್ನು ನೀಡಲಾಗುತ್ತದೆ. ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಲಾಗುತ್ತದೆ.

- ತರಬೇತಿ ಅವಧಿಯಲ್ಲಿ ಪ್ರತಿ ತಿಂಗಳು ರೂ.10,000/- ಶಿಷ್ಯವೇತನ ನೀಡಲಾಗುತ್ತದೆ.
- ತರಬೇತಿಯ ಅವಧಿಯಲ್ಲಿ ಮಾಸಿಕ ವರದಿ ಮತ್ತು ಹಾಜರಾತಿ ಸಲ್ಲಿಸಬೇಕಾಗಿದ್ದು, ಅದರನ್ವಯ ಶಿಷ್ಯವೇತನವನ್ನು ಪಾವತಿಸಲಾಗುತ್ತದೆ.
- ತರಬೇತಿ ಪಡೆದ ಕಾನೂನು ಪದವೀಧರರಿಗೆ ಕಛೇರಿ ಸ್ಥಾಪನೆಗೆ ತಾಲ್ಲೂಕು ಮಟ್ಟದಲ್ಲಿ ರೂ.50000/-, ನಗರ ಪಾಲಿಕೆ/ ಮಹಾನಗರ ಪಾಲಿಕೆ/ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ರೂ.1,00,000/- ಧನಸಹಾಯ ನೀಡಲಾಗುತ್ತದೆ.

➢ **"ಪ್ರಬುದ್ಧ" – ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಧನಸಹಾಯ:**

ಈ ಯೋಜನೆಯಡಿ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ Engineering and Management, Pure Sciences and Applied Sciences, Agriculture sciences and Medicine, International Commerce, Accounting Finance, Humanities, Social science and Law, Any other Symposia/Workshop/Seminar ವಿಷಯಗಳಲ್ಲಿ ಸ್ನಾತಕೋತ್ತರ ಪದವಿ/ ಪಿ.ಹೆಚ್.ಡಿ. / ಪೋಸ್ಟ್ ಪಿ.ಹೆಚ್.ಡಿ ಅಧ್ಯಯನ ಕೈಗೊಳ್ಳುವ ಪ.ಜಾತಿ ಅಭ್ಯರ್ಥಿಗಳಿಗೆ ಧನಸಹಾಯವನ್ನು ನೀಡಲಾಗುತ್ತಿದೆ.

ವಾರ್ಷಿಕ ಆದಾಯ ಮಿತಿ

- ರೂ.8.00 ಲಕ್ಷಗಳು – 100% ವೆಚ್ಚ ಭರಿಸುವುದು.
- ರೂ.8.00 ಲಕ್ಷಗಳಿಂದ ರೂ.15.00 ಲಕ್ಷಗಳು – 50% ವೆಚ್ಚ ಭರಿಸುವುದು
- ರೂ.15.00 ಲಕ್ಷಗಳಿಂದ ರೂ.25.00 ಲಕ್ಷಗಳು – 33% ವೆಚ್ಚ ಭರಿಸುವುದು

➢ **ಪ್ರಬುದ್ಧ – ಧನಸಹಾಯ ಪಡೆಯಲು ಅಭ್ಯರ್ಥಿಗಳು ಹೊಂದಿರಬೇಕಾಗಿರುವ ಅರ್ಹತೆಗಳು.**

- ಅಭ್ಯರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು.
- ಕರ್ನಾಟಕ ರಾಜ್ಯ ಪ್ರಕಟಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು.
- ಇಲಾಖೆಯಿಂದ ಪ್ರಕಟಿಸಲಾದ ವಿದೇಶಿ ವಿಶ್ವವಿದ್ಯಾಲಯದಿಂದ ಆಫರ್ ಲೆಟರ್ ಪಡೆದಿರಬೇಕು.
- ವಿದೇಶಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಲು ಉದ್ದೇಶಿಸಿರುವ ಅಭ್ಯರ್ಥಿಯು ಯು.ಜಿ.ಸಿ ಮಾನ್ಯತೆ ಪಡೆದ ವಿಶ್ವ ವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು. ಪಿ.ಹೆಚ್.ಡಿ ಅಧ್ಯಯನಕ್ಕೆ ತೆರಳುವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ ಪಡೆದಿರಬೇಕು.

➢ **ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ (ಯು.ಪಿ.ಎಸ್.ಸಿ/ಕೆ.ಪಿ.ಎಸ್.ಸಿ ಮತ್ತು ಬ್ಯಾಂಕಿಂಗ್)**

- ಅಭ್ಯರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು ಮತ್ತು ಪದವೀಧರರಾಗಿಬೇಕು.
- ಕರ್ನಾಟಕ ರಾಜ್ಯ ಪ್ರಕಟಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು.
- ವಾರ್ಷಿಕ ಆದಾಯ ಮಿತಿ ರೂ. 5.00 ಲಕ್ಷ
- ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ಮೆರಿಟ್ ಆಧಾರದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದ್ದು, ತರಬೇತಿ ಸಂಸ್ಥೆಯನ್ನು ಅಭ್ಯರ್ಥಿಗಳೇ ಕೌನ್ಸಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಬಹುದಾಗಿದೆ.
- ದೆಹಲಿ, ಹೈದರಾಬಾದ್, ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಮೂಲಕ ಯು.ಪಿ.ಎಸ್.ಸಿ, ಕೆ.ಪಿ.ಎಸ್.ಸಿ. ಮತ್ತು ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಲಾಖೆಯಿಂದ ತರಬೇತಿಯನ್ನು ನೀಡಲಾಗುತ್ತಿದ್ದು, ತರಬೇತಿ ಶುಲ್ಕ ಮತ್ತು ತರಬೇತಿಯ ಅವಧಿಯಲ್ಲಿ ಶಿಷ್ಯವೇತನವನ್ನು ನೀಡಲಾಗುತ್ತದೆ. (ಮಾಸಿಕ ರೂ. 5000/- ದಿಂದ ರೂ. 10000/- ದವರೆಗೆ)
- ತರಬೇತಿ ಸಂಸ್ಥೆಗಳಿಗೆ ಕಾಲ ಕಾಲಕ್ಕೆ ನಿಗದಿ ಪಡಿಸಲಾದ ತರಬೇತಿ ಶುಲ್ಕವನ್ನು ನೀಡಲಾಗುತ್ತದೆ.

II_ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ನೀಡಲಾಗುತ್ತಿರುವ ಸೌಲಭ್ಯಗಳು.

➢ ಗಂಗಾ ಕಲ್ಯಾಣ :

- ಪರಿಶಿಷ್ಟ ಜಾತಿ/ಪಂಗಡದ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಕೊಳವೆಬಾವಿ/ತೆರೆದಬಾವಿ ಕೊರೆದು ಪಂಪ್‌ಸೆಟ್ ಸೌಲಭ್ಯದೊಂದಿಗೆ ವಿದ್ಯುದ್ದೀಕರಣಗೊಳಿಸಿ ನೀರಾವರಿ ಸೌಲಭ್ಯ ಒದಗಿಸುವುದು. ಘಟಕ ವೆಚ್ಚ ರೂ.3.50 ಲಕ್ಷಗಳಲ್ಲಿ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತದೆ. (ರೂ.50,000/- ಇಂಧನ ಇಲಾಖೆಗೆ ವಿದ್ಯುತ್ ಸಂಪರ್ಕಕ್ಕಾಗಿ)

- ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರು ಈ 6 ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.4.50 ಲಕ್ಷಗಳಲ್ಲಿ ರೂ.4.00 ಲಕ್ಷ ಸಹಾಯಧನ ನೀಡಲಾಗುತ್ತದೆ. (ರೂ.50,000/- ಇಂಧನ ಇಲಾಖೆಗೆ ವಿದ್ಯುತ್ ಸಂಪರ್ಕಕ್ಕಾಗಿ)
- ಅವಧಿ ಸಾಲ ರೂ.50,000/- ವನ್ನು ನಿಗಮಗಳಿಂದ 6% ರ ಬಡ್ಡಿದರದಲ್ಲಿ ನೀಡಲಾಗುವುದು. 10 ಅರ್ಧವಾರ್ಷಿಕ ಕಂತುಗಳಲ್ಲಿ ಸಾಲ ಮರುಪಾವತಿಸಬೇಕು.

➢ **ಭೂ ಒಡೆತನ**

- ಭೂ ರಹಿತ ಕೃಷಿ ಕಾರ್ಮಿಕ ಕುಟುಂಬದ ಮಹಿಳೆಯರಿಗೆ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಜಮೀನನ್ನು ಖರೀದಿಸಿ ನೋಂದಣಿ ಮಾಡಲಾಗುತ್ತದೆ. ಸದರಿ ಯೋಜನೆಯಡಿ ಘಟಕ ವೆಚ್ಚ ರೂ.15.00 ಲಕ್ಷಗಳಲ್ಲಿ 50% ಸಾಲ, 50% ಸಹಾಯಧನವನ್ನು ನಿಗಮಗಳಿಂದ ನೀಡಲಾಗುತ್ತದೆ.
- ಬೆಂಗಳೂರು ವಿಭಾಗದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಿಗೆ ಘಟಕ ವೆಚ್ಚ ರೂ.20.00 ಲಕ್ಷಗಳಲ್ಲಿ ರೂ.10.00 ಲಕ್ಷ ಸಾಲ ಮತ್ತು ರೂ.10.00 ಲಕ್ಷ ಸಹಾಯಧನವನ್ನು ನಿಗಮಗಳಿಂದ ನೀಡಲಾಗುತ್ತದೆ.
- ಸಾಲವನ್ನು 6% ರ ಬಡ್ಡಿದರದಲ್ಲಿ 20 ಅರ್ಧವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕು.

III ಮಹಿಳೆಯರು, ಮಕ್ಕಳು ಮತ್ತು ವಿಕಲಚೇತನರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರ.

➢ **ಮಹಿಳಾ ಸ್ವಸಹಾಯ ಸಂಘಗಳಿಗೆ ಕಿರು ಸಾಲ ಯೋಜನೆ :**

ಆದಾಯ ಉತ್ಪನ್ನ ಚಟುವಟಿಕೆಗಳಿಗಾಗಿ ಸ್ವಸಹಾಯ ಸಂಘದ ಸದಸ್ಯರಿಗೆ ತಲಾ ರೂ.15,000/- ಸಹಾಯಧನ ಮತ್ತು ರೂ.10,000/- ಸಾಲದಂತೆ 10 ಸದಸ್ಯರಿರುವ ಸಂಘಕ್ಕೆ ರೂ.1.50 ಲಕ್ಷ ಸಹಾಯಧನ ಮತ್ತು ರೂ.1.00 ಲಕ್ಷ ಸಾಲವನ್ನು ಸಮಾಜ ಕಲ್ಯಾಣ ಇಲಾಖೆಯ ವಿವಿಧ ನಿಗಮಗಳ ಮೂಲಕ ನೀಡಲಾಗುತ್ತದೆ.

IV ಅಸ್ಪೃಶ್ಯತಾ ನಿವಾರಣೆ ಮತ್ತು ಸಬಲೀಕರಣ ಕಾರ್ಯಕ್ರಮಗಳು

➢ ಅಂತರ್ ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ :

ಅಸ್ಪೃಶ್ಯತಾ ನಿವಾರಣೆ ಉದ್ದೇಶದಿಂದ ಅಂತರ್ ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತದೆ.

- ಪರಿಶಿಷ್ಟ ಜಾತಿ ಯುವಕರು ಇತರೆ ಜಾತಿಯ ಯುವತಿಯರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.2.50 ಲಕ್ಷಗಳ ಪ್ರೋತ್ಸಾಹಧನ
- ಪರಿಶಿಷ್ಟ ಜಾತಿ ಯುವತಿಯರು ಇತರೆ ಜಾತಿಯ ಯುವಕರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ.
- ಅಂತರ್‌ಜಾತಿ ವಿವಾಹವನ್ನು ನೊಂದಾಯಿಸತಕ್ಕದ್ದು.
- ಮದುವೆಯಾದ ನಂತರ 18 ತಿಂಗಳೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.
- ಯುವತಿಯ ವಯಸ್ಸು 18 ರಿಂದ 42 ವರ್ಷ.
- ಯುವಕನ ವಯಸ್ಸು 21 ರಿಂದ 45 ವರ್ಷ.
- ವಾರ್ಷಿಕ ಆದಾಯ ಮಿತಿ ರೂ.5.00 ಲಕ್ಷಗಳು.

➢ ವಿಧವಾ ಮರು ವಿವಾಹಕ್ಕೆ ಪ್ರೋತ್ಸಾಹಧನ:

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿಧವೆಯರು ಹೊಸ ಬದುಕನ್ನು ರೂಪಿಸಲು ಅನುಕೂಲವಾಗುವಂತೆ ಅವರು ಮರು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

- ವಿಧವೆಯ ವಯೋಮಿತಿ 18 ರಿಂದ ಗರಿಷ್ಠ 42 ವರ್ಷ
- ವಿವಾಹವಾಗುವ ವರನ ವಯೋಮಿತಿ 21 ರಿಂದ 45 ವರ್ಷ
- ಮರು ವಿವಾಹದ ಬಗ್ಗೆ ನೊಂದಾಯಿಸತಕ್ಕದ್ದು.

- ವಿವಾಹವಾದ 1 ವರ್ಷದೊಳಗೆ ಅರ್ಜಿ ಸಲ್ಲಿಸಬೇಕು.
- ಅಂತರ್‌ಜಾತಿ ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ.

➢ **ಒಳ ಪಂಗಡಗಳ ಅಂತರ್‌ಜಾತಿ ವಿವಾಹ:**

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಯುವಕ/ಯುವತಿಯರು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಉಪ ಜಾತಿಗಳ ಯುವತಿ/ಯುವಕರನ್ನು ವಿವಾಹವಾದಲ್ಲಿ ರೂ.2.00 ಲಕ್ಷ ಪ್ರೋತ್ಸಾಹಧನ ನೀಡಲಾಗುತ್ತಿದೆ.

- ವಯೋಮಿತಿ–ಯುವಕ 21 ರಿಂದ 45 ವರ್ಷ ಹಾಗೂ ಯುವತಿ 18 ರಿಂದ 42 ವರ್ಷ.
- ದಂಪತಿಗಳ ವಾರ್ಷಿಕ ಆದಾಯ ರೂ. 5.00 ಲಕ್ಷ ಮೀರಿರಬಾರದು
- ಅಂತರ್‌ಜಾತಿ ವಿವಾಹ/ವಿಧವಾ ಮರು ವಿವಾಹ ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ.
- ಮದುವೆಯಾದ ನಂತರ 18 ತಿಂಗಳೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.

➢ **ಸರಳ ವಿವಾಹ:**

ಸರ್ಕಾರದ ಆದೇಶ ಸಂಖ್ಯೆ:ಸಕಇ 262 ಎಸ್‌ಎಲ್‌ಪಿ 2015 ದಿನಾಂಕ:11.08.2015 ರನ್ವಯ ಈ ಕಾಯಕ್ರಮವನ್ನು ಜಾರಿಗೆ ತಂದಿರುತ್ತಿದೆ. ಈ ಯೋಜನೆಯನ್ವಯ ನೋಂದಾಯಿತ ಸಂಘ–ಸಂಸ್ಥೆಗಳು. ಧಾರ್ಮಿಕ ಸಂಸ್ಥೆಗಳು ವ್ಯವಸ್ಥೆ ಮಾಡುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಿವಾಹವಾಗುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ದಂಪತಿಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ.

- ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ವಿವಾಹವಾಗಿರಬೇಕು, ವಿವಾಹವಾದ 1 ವರ್ಷದೊಳಿಗೆ ಅರ್ಜಿಸಲ್ಲಿಸಬೇಕು.
- ಇಂತಹ ಸಾಮೂಹಿಕ ಕಾರ್ಯಕ್ರಮಗಳಲ್ಲಿ ಕನಿಷ್ಟ 10 ಜೋಡಿಗಳು ವಿವಾಹವಾಗಿರತಕ್ಕದ್ದು.
- ಸರಳವಾಗಿ ವಿವಾಹದ ದಂಪತಿಗಳಿಗೆ ರೂ.50,000/– ಸಾವಿರ ಪ್ರೋತ್ಸಾಹಧನ ನೀಡಲಾಗುವುದು.
- ಇಂತಹ ಕುಟುಂಬದ ವಾರ್ಷಿಕ ವರಮಾನ ರೂ.5.00 ಲಕ್ಷಗಳಿಗೆ ಮೀರಿಬಾರದು.
- ಸರಳ ವಿವಾಹವಾಗುವ ದಂಪತಿಗಳಲ್ಲಿ ಯುವಕನ ವಯಸ್ಸು 21 ರಿಂದ 45 ವರ್ಷ ಯುವತಿಯ ವಯಸ್ಸು 18 ರಿಂದ 42 ವರ್ಷ
- ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಏರ್ಪಡಿಸುವ ಆಯೋಜಕರುಗಳಿಗೆ ಪ್ರೋತ್ಸಾಹಧನ ಹಾಗೂ ವಿವಾಹದ ಖರ್ಚು–ವೆಚ್ಚಗಳಿಗಾಗಿ ಪ್ರತಿ ಜೋಡಿಗೆ ರೂ.2,000/– ಸಾವಿರಗಳನ್ನು ನೀಡಲಾಗುವುದು.
- ಅಂತರ್‌ಜಾತಿ ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ.

➢ **ದೇವದಾಸಿಯರ ಮಕ್ಕಳ ಮದುವೆಗೆ ಪ್ರೋತ್ಸಾಹಧನ**

- ಮಾಜಿ ದೇವದಾಸಿಯರ ಗಂಡು ಮಕ್ಕಳು ಇತರೆ ದೇವದಾಸಿಗಳಲ್ಲದ ಯಾವುದೇ ಜಾತಿಯ ಯುವತಿಯರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ. ಮಾಜಿ ದೇವದಾಸಿಯರ ಹೆಣ್ಣು ಮಕ್ಕಳು ಇತರೆ ದೇವದಾಸಿಗಳಲ್ಲದ ಯಾವುದೇ ಜಾತಿಯ ಯುವಕರನ್ನು ವಿವಾಹವಾದಲ್ಲಿ ಅಂತಹ ದಂಪತಿಗೆ ರೂ.5.00 ಲಕ್ಷ ಗಳ ಪ್ರೋತ್ಸಾಹಧನ.
- ವಿವಾಹವಾದ 18 ತಿಂಗಳೊಳಗೆ ವಿವಾಹವಾದ ಬಗ್ಗೆ ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಿ ಅರ್ಜಿ ಸಲ್ಲಿಸಿರಬೇಕು.
- ಯುವತಿಯ ವಯಸ್ಸು 18 ರಿಂದ 42 ವರ್ಷ.
- ಯುವಕನ ವಯಸ್ಸು 21 ರಿಂದ 45 ವರ್ಷ.
- ಆದಾಯ ಮಿತಿ ರೂ.5.00 ಲಕ್ಷಗಳು.
- ಗುರ್ತಿಸಲ್ಪಟ್ಟ ದೇವದಾಸಿಯವರ ಮಕ್ಕಳನ್ನು ಗುರ್ತಿಸಲ್ಪಟ್ಟ ಇನ್ನೊಬ್ಬ ದೇವದಾಸಿಯವರ ಮಕ್ಕಳನ್ನು ಮದುವೆ ಮಾಡಿಕೊಂಡರೆ ಪ್ರೋತ್ಸಾಹಧನ ಪಡೆಯಲು ಅರ್ಹರಿರುವುದಿಲ್ಲ.

ಮೇಲ್ಕಂಡ ಎಲ್ಲಾ ವಿವಾಹ ಪ್ರೋತ್ಸಾಹಧನಗಳಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗಿದ್ದು, ವೆಬ್‌ಸೈಟ್ ವಿಳಾಸ www.sw.kar.nic.in.

➢ **ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸಂತ್ರಸ್ತರಿಗೆ ಪರಿಹಾರ:**

- ದೌರ್ಜನ್ಯ ಪ್ರತಿಬಂಧ ಅಧಿನಿಯಮ 1989 ಮತ್ತು ನಿಯಮಗಳು 1995 ಹಾಗೂ ಪರಿಷ್ಕೃತ ಅಧಿನಿಯಮ 2016 ರ ಅನ್ವಯ ಸರ್ಕಾರದ ಆದೇಶ ಸಂ:ಸಕಇ 37 ಎಸ್‌ಪಿಎ 2016, ಬೆಂಗಳೂರು ದಿನಾಂಕ: 20.06.2016 ರನ್ವಯ ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಸಂತ್ರಸ್ತರಿಗೆ ದೌರ್ಜನ್ಯದ ಸ್ವರೂಪ ಮತ್ತು ತೀವ್ರತೆ ಆಧರಿಸಿ ಕನಿಷ್ಠ ರೂ.85,000/- ಗಳಿಂದ ಗರಿಷ್ಠ ರೂ.8,25,000/- ಗಳವರೆಗೆ ಪರಿಹಾರಧನ ನೀಡಲಾಗುತ್ತದೆ.
- ದೌರ್ಜನ್ಯದಲ್ಲಿ ಕುಟುಂಬದ ದುಡಿಯುವ ವ್ಯಕ್ತಿ ಮೃತಪಟ್ಟಲ್ಲಿ ಅವರ ಅವಲಂಬಿತರಿಗೆ ಅನುಕಂಪ ಆಧಾರದಲ್ಲಿ ಸರ್ಕಾರಿ ನೌಕರಿ ನೀಡಲಾಗುತ್ತದೆ.

ಪರಿಹಾರ ಧನವನ್ನು ಮತ್ತು ಪುನರ್ವಸತಿಗಳನ್ನು ಮೇಲ್ಕಂಡ ಕಾಯ್ದೆಯ ನಿಯಮ 12(ಎ) ಅಡಿ ಒದಗಿಸುವುದು.

V ಪ.ಜಾತಿ/ಪ.ಪಂಗಡದ ಜನರಿಗೆ ಸ್ವಯಂ ಉದ್ಯೋಗ ಮೂಲಕ ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳು.

➢ **4% ಬಡ್ಡಿ ಸಹಾಯಧನ ಕಾರ್ಯಕ್ರಮ.**

- ಪರಿಶಿಷ್ಟ ಜಾತಿ/ಪ.ಪಂಗಡದ ಉದ್ದಿಮೆದಾರರು ಎಂ.ಎಸ್.ಎಂ.ಇ ಘಟಕಗಳನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ರಾಷ್ಟ್ರೀಕೃತ / ಜಿಲ್ಲಾ ಸಹಕಾರಿ ಬ್ಯಾಂಕ್/ಅಪೆಕ್ಸ್ ಸಹಕಾರಿ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ 4% ಬಡ್ಡಿ ಸಹಾಯಧನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
- ಸಾಲದ ಮಿತಿ – ಕನಿಷ್ಟ ರೂ.10.00 ಲಕ್ಷದಿಂದ ಗರಿಷ್ಟ ರೂ.10.00 ಕೋಟಿಗಳವರೆಗೆ ಈ ಯೋಜನೆಯಡಿ ಸಹಾಯಧನಕ್ಕೆ ಅವಕಾಶವಿದೆ. ಸಾಲದ ಮರು ಪಾವತಿ ಅವಧಿ 8 ವರ್ಷಗಳಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ SWD/158/SLP/2016, Dated: 12.07.2016.
- 2021-22ನೇ ಸಾಲಿನಿಂದ ವಾಣಿಜ್ಯ ಮತ್ತು ವ್ಯಾಪಾರ ಚಟುವಟಿಕೆಗಳಾದ ಮಳಿಗೆ/ಡೀಲರ್ ಶಿಪ್/ಫ್ರಾಂಚೈಸಿ ಮತ್ತು ಹೋಟೆಲ್ ಉದ್ಯಮಗಳನ್ನು ಪ್ರಾರಂಭಿಸಲು ಸಹ 4% ಬಡ್ಡಿ ಸಹಾಯಧನ ಯೋಜನೆಯನ್ನು ವಿಸ್ತರಿಸಿದ್ದು, ಈ ಯೋಜನೆಯಡಿ ಗರಿಷ್ಟ ರೂ.1.00 ಕೋಟಿವರೆಗೆ ರಾಷ್ಟ್ರೀಕೃತ ಮತ್ತು ವಾಣಿಜ್ಯ ಶೆಡ್ಯೂಲ್ಡ್ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ SWD/157/SLP/2021, Dated: 25.08.2021.

➢ **ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಉದ್ಯಮಿಗಳಿಗೆ ಕೆ.ಎಸ್.ಎಫ್.ಸಿ ಯಿಂದ ಸಾಲ ಮಂಜೂರಾತಿಗೆ Collateral Security ಒದಗಿಸುವುದು.**

- ಕೆ.ಎಸ್.ಎಫ್.ಸಿ ಯಿಂದ ಪ.ಜಾತಿ / ಪ.ವರ್ಗದವರಿಗೆ ಮಂಜೂರು ಮಾಡುವ ಸಾಲಕ್ಕೆ ಗರಿಷ್ಠ ರೂ.2.00 ಕೋಟಿಗಳವರೆಗೆ Collateral Security ಯನ್ನು ಸರ್ಕಾರದಿಂದ ಒದಗಿಸಲಾಗುತ್ತಿದೆ. ಈ ಸೌಲಭ್ಯವನ್ನು ಕೆ.ಎಸ್.ಎಫ್.ಸಿ Collateral Security ನಿಯಮಗಳಂತೆ ಸರ್ಕಾರದಿಂದ ಒದಗಿಸಲಾಗುತ್ತದೆ. ಉಳಿದ ಮೊತ್ತಕ್ಕೆ ಫಲಾನುಭವಿಗಳು ಸಮಾನಾಂತರ ಖಾತ್ರಿಯನ್ನು ಒದಗಿಸಬೇಕಾಗುತ್ತದೆ.
- ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆಯುವವರಿಗೆ ಭಾರತ ಸರ್ಕಾರದ ನಿಯಮಗಳಂತೆ Collateral Security ಒದಗಿಸಲು ವಿನಾಯಿತಿ ನೀಡಲಾಗಿದೆ.

➢ **ಸ್ವಯಂ ಉದ್ಯೋಗಕ್ಕಾಗಿ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ನಿಗಮಗಳಿಂದ ಸಹಾಯಧನ.**

- **ನೇರ ಸಾಲ/ಸಹಾಯಧನ ಯೋಜನೆ:** ತರಕಾರಿ, ಹಣ್ಣು-ಹಂಪಲು, ಮೀನು, ಮಾಂಸ ಮಾರಾಟ, ಕುರಿ/ಹಂದಿ/ ಮೊಲ ಸಾಕಾಣಿಕೆ ಮುಂತಾದ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ಮಳಿಗೆ/ ತಳ್ಳುಗಾಡಿ ದುಡಿಮೆ ಬಂಡವಾಳ ಸೇರಿದಂತೆ ಗರಿಷ್ಠ ಘಟಕ ವೆಚ್ಚ ರೂ. 50,000/- ದಲ್ಲಿ 50% ಸಾಲ ಮತ್ತು 50% ಸಹಾಯಧನ ನೀಡಲಾಗುವುದು.
- **ಇತರೆ ಬ್ಯಾಂಕ್ ಲಿಂಕ್ಡ್ ಸ್ವಯಂ ಉದ್ಯೋಗ ಕಾರ್ಯಕ್ರಮಗಳಿಗೆ** ಐ.ಎಸ್.ಬಿ ಮಾರ್ಗಸೂಚಿಗಳಂತೆ ಘಟಕ ವೆಚ್ಚದಲ್ಲಿ ಸಹಾಯಧನವನ್ನು ಗರಿಷ್ಠ ರೂ.2.00 ಲಕ್ಷಕ್ಕೆ ಮಿತಿಗೊಳಿಸಿ ಬ್ಯಾಂಕ್ ಸಾಲದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸುವುದು.

* ಸರಕು ವಾಹನಗಳಿಗೆ ಗರಿಷ್ಠ ರೂ.3.50 ಲಕ್ಷ ಸಹಾಯಧನ (ಬ್ಯಾಂಕ್ ಲಿಂಕ್ಡ್ ಸಾಲದೊಂದಿಗೆ) ಸಮಾಜ ಕಲ್ಯಾಣ ಇಲಾಖೆಯ ನಿಗಮಗಳ ಮೂಲಕ ಆನ್‌ಲೈನ್ ಅರ್ಜಿ ಸ್ವೀಕರಿಸಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

VI ಪರಿಶಿಷ್ಟ ಜಾತಿ ವಾಸಸ್ಥಳ/ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅನುಷ್ಠಾನ ಮಾಡುತ್ತಿರುವ ಕಾರ್ಯಕ್ರಮಗಳ ವಿವರ.

➢ **ಪ್ರಗತಿ ಕಾಲೋನಿ :** ಪ.ಜಾತಿ /ಪ.ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಾದ ಸಿ.ಸಿ.ರಸ್ತೆ ಮತ್ತು ಚರಂಡಿ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು.

➢ **ಸ್ಮಶಾನ ಅಭಿವೃದ್ಧಿ:**

* ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರಿಗೆ ಸ್ಮಶಾನ ಅಭಿವೃದ್ಧಿ.
* ಸರ್ಕಾರಿ ಜಾಗ ಇಲ್ಲದೇ ಇರುವ ಸ್ಥಳಗಳಲ್ಲಿ ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ನಿವೇಶನ ಖರೀದಿಗೆ ಅವಕಾಶವಿದೆ.

➢ **ಸಮುದಾಯ ಭವನ ನಿರ್ಮಾಣ :** ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರ ಕಾಲೋನಿಗಳಲ್ಲಿ ಸಮುದಾಯ ಭವನಗಳನ್ನು ನಿರ್ಮಿಸಲಾಗುತ್ತದೆ. ನಿಗದಿಪಡಿಸಿದ ಮೊತ್ತದ ವಿವರ.

ಗ್ರಾಮಮಟ್ಟದಲ್ಲಿ – ರೂ.20.00 ಲಕ್ಷ, ಹೋಬಳಿ – ರೂ.50.00 ಲಕ್ಷ,

ತಾಲ್ಲೂಕು ಮಟ್ಟದಲ್ಲಿ – ರೂ.1.00 ಕೋಟಿ, ಜಿಲ್ಲಾ ಮಟ್ಟದಲ್ಲಿ – ರೂ.3.00 ಕೋಟಿ

➢ **ಸಮುದಾಯ ಭವನಗಳ ನಿರ್ವಹಣೆ**

* ಗ್ರಾಮ ಮಟ್ಟದಲ್ಲಿ ಪಿ.ಡಿ.ಒ ಅಧ್ಯಕ್ಷತೆಯಲ್ಲಿ ಸಮಾಜ ಮುಖಂಡರನ್ನು ಒಳಗೊಂಡ ಸಮಿತಿಯಿಂದ ನಿರ್ವಹಣೆ ಮಾಡುವುದು.
* ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಸಮಾಜ ಮುಖಂಡರನ್ನು ಒಳಗೊಂಡ ಸಮಿತಿಯಿಂದ ನಿರ್ವಹಣೆ ಮಾಡುವುದು.
* ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಾಜ ಮುಖಂಡರನ್ನು ಒಳಗೊಂಡ ಸಮಿತಿಯಿಂದ ನಿರ್ವಹಣೆ ಮಾಡುವುದು.

ಸರ್ಕಾರಿ ಇಲಾಖೆಗಳ ಮತ್ತು ಸಾರ್ವಜನಿಕರ ಕಾರ್ಯಕ್ರಮಗಳಿಗಾಗಿ ಸಮುದಾಯ ಭವನಗಳನ್ನು ಬಾಡಿಗೆ ಆಧಾರದ ಮೇಲೆ ನೀಡಬಹುದು ಮತ್ತು ಆ ಬಾಡಿಗೆ ಹಣದಿಂದ ಸಮುದಾಯ ಭವನಗಳನ್ನು ನಿರ್ವಹಿಸುವುದು.

*** * ***

ಅನುಬಂಧ-3

ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ

ವಿವಿಧ ಯೋಜನೆಗಳಡಿ ಕಳೆದ 05 ವರ್ಷಗಳಿಂದ ಸಾಧಿಸಿರುವ ಪ್ರಗತಿ ವಿವರ ಕೆಳಕಂಡಂತಿದೆ.

ಕ್ರ.ಸಂ	ವರ್ಷ	ಗುರಿ	ಸಾಧನೆ	ಬಾಕಿ
01	2016-17	53859	53482	377
02	2017-18	167046	166390	656
03	2018-19	12080	11051	1029
04	2019-20	11783	9791	1992
05	2020-21	41745	40419	1326
	ಒಟ್ಟು	286513	281133	5380

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ:

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವು 2018-19ನೇ ಸಾಲಿನಿಂದ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಯೋಜನಾವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಗಂಗಾ ಕಲ್ಯಾಣ ಯೋಜನೆಯನ್ನು ಹೊರತುಪಡಿಸಿ ಉಳಿದ ಯೋಜನೆಗಳ ಪ್ರಗತಿಯು ಪೂರ್ಣಗೊಂಡಿದೆ.

ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ:

2020-21ನೇ ಸಾಲಿನಿಂದ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮವು ಸ್ವತಂತ್ರವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯಾರಂಭ ಮಾಡಿರುತ್ತದೆ. ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ಸಂಬಂಧಪಟ್ಟಂತೆ 2016-17, 2017-2018, 2018-19 ಮತ್ತು 2019-20ನೇ ಸಾಲಿನ ಯೋಜನೆಗಳನ್ನು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗಿದ್ದು, ಸಂಬಂಧಿಸಿದಂತೆ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಮಾಹಿತಿಯನ್ನು ಒದಗಿಸಲಾಗುವುದು. 2020-21ನೇ ಸಾಲಿನ ಯೋಜನೆಗಳ ಪ್ರಗತಿಯನ್ನು 3ಎ ನಲ್ಲಿ ಒದಗಿಸಿದೆ.

ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ

ನಿಗಮವು ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಶ್ರೇಯೋಭಿವೃದ್ಧಿಗಾಗಿ ಪ್ರತಿ ವರ್ಷವೂ ವಾರ್ಷಿಕ ಕ್ರಿಯಾ ಯೋಜನೆ ರೂಪಿಸಿ ಸರ್ಕಾರದ ಅನುಮೋದನೆ ಪಡೆದು ಆಯಾ ವರ್ಷಗಳಲ್ಲೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

..2

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಕಳೆದ 5 ವರ್ಷಗಳಲ್ಲಿ ಸಾಧಿಸಿರುವ ಆರ್ಥಿಕ ಮತ್ತು ಭೌತಿಕ ಗುರಿಗಳು ಈ ಕೆಳಗಿನಂತಿವೆ.

ವರ್ಷ	ಭೌತಿಕ ಸಾಧನೆ	ಆರ್ಥಿಕ ಸಾಧನೆ
2016-17	872	13.60
2017-18	1421	21.96
2018-19	850	13.75
2019-20	1122	18.06
2020-21	4240	48.12

*****

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ   ಅನುಬಂಧ-3

ತಾಂಡಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಯೋಜನೆಗಳು:-

- ತಾಂಡಗಳಲ್ಲಿ ಸರ್ವಋತು ಸಿಸಿ ರಸ್ತೆಗಳು ಮತ್ತು ಒಳ ಚರಂಡಿಗಳು
- ಮುಖ್ಯ ರಸ್ತೆಯಿಂದ ತಾಂಡಾಗಳಿಗೆ ಸಂಪರ್ಕ ರಸ್ತೆ
- ಶುದ್ಧ ಕುಡಿಯುವ ನೀರು
- ಬೀದಿ ದೀಪಗಳು ಮತ್ತು ವಿದ್ಯುತ್ ಸಂಪರ್ಕ

ತಾಂಡಗಳಿಗೆ ಸಂಪರ್ಕ ರಸ್ತೆ, ಸಿಸಿ ರಸ್ತೆ ಬಾಕ್ಸ್ ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳ ಮಂಜೂರಾತಿ ನೀಡುವ ಪೂರ್ವದಲ್ಲಿ ಅವುಗಳ ಅಗತ್ಯತೆ ಕುರಿತು ಪರಿಶೀಲಿಸಲಾಗುತ್ತದೆ. ತಾಂಡಗಳಿಗೆ ಅಗತ್ಯ ಮೂಲಸೌಕರ್ಯಗಳ ಮಂಜೂರಾತಿಗಾಗಿ ಪೂರಕ ಮಾಹಿತಿಗಳನ್ನು ತಾಂಡದ ಜನರು ಒದಗಿಸಬೇಕು. ಸಿಸಿ ರಸ್ತೆ, ಸಂಪರ್ಕ ರಸ್ತೆ ಬಾಕ್ಸ್ ಚರಂಡಿಗಳ ನಿರ್ಮಾಣ ಸಂಬಂಧ ತಾಂಡದ ಬೀದಿ ರಸ್ತೆ/ಸಂಪರ್ಕ ರಸ್ತೆ/ಬಾಕ್ಸ್ ಚರಂಡಿಗಳ ಛಾಯಚಿತ್ರ ಉದ್ದಗಲ ಬೀದಿಯ ಎರಡು ಕೊನೆಗಳಲ್ಲಿರುವ ಮನೆಗಳ ಕುಟುಂಬದ ಹೆಸರು ಇತ್ಯಾದಿ ವಿವರ ಹಾಗೂ ಛಾಯಚಿತ್ರಗಳನ್ನು ಅಗತ್ಯವಾಗಿ ಒದಗಿಸಬೇಕು.

2. ಸಮುದಾಯ ಭವನಗಳ ನಿರ್ಮಾಣ ಯೋಜನೆ:-

- ಸಾಂಸ್ಕೃತಿಕ ಕೇಂದ್ರ ನಿರ್ಮಾಣ
- ತಾಂಡಾ ಮಟ್ಟದಲ್ಲಿ ಸೇವಾಲಾಲ್ ಸಮುದಾಯ ಭವನ.
- ಹೋಬಳಿ ಮಟ್ಟದ ಸೇವಾಲಾಲ್ ಸಮುದಾಯ ಭವನ
- ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಬಂಜಾರ ಭವನ.
- ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಬಂಜಾರ ಭವನ

ತಾಂಡಾಗಳಿಗೆ ಸೇವಾಲಾಲ್ ಸಮುದಾಯ ಭವನ, ಅಂಗನವಾಡಿ ಕಟ್ಟಡ, ಜಿಲ್ಲೆ ಮತ್ತು ತಾಲ್ಲೂಕು ವ್ಯಾಪ್ತಿಯಲ್ಲಿ ಬಂಜಾರ ಜನರು ವಾಸವಾಗಿರುವುದನ್ನು ಆಧರಿಸಿ ತಾಲ್ಲೂಕು ಕೇಂದ್ರ ಸ್ಥಳಗಳಲ್ಲಿ ತಾಲ್ಲೂಕು ಬಂಜಾರ ಭವನ ಜಿಲ್ಲಾ ಕೇಂದ್ರ ಸ್ಥಳದಲ್ಲಿ ಜಿಲ್ಲಾ ಬಂಜಾರ ಭವನಗಳನ್ನು ನಿರ್ಮಿಸುವುದಾಗಿದೆ. ತಾಂಡಗಳಿಗೆ ಸೇವಾಲಾಲ್ ಭವನಗಳ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಆಯಾ ವಿಧಾನ ಸಭಾ ಕ್ಷೇತ್ರದ ಶಾಸಕರ ಶಿಫಾರಸ್ಸಿನನ್ವಯ ತಾಂಡ ಅಭಿವೃದ್ಧಿ ನಿಗಮವು ಮಂಜೂರು ಮಾಡುವುದಾಗಿದೆ.

